# ಸಹಕಾರ ಕ್ಷೇತ್ರ ಬಲಪಡಿಸಲು ಕಾಯ್ದೆಗೆ ತಿದ್ದುಪಡಿ

## ಶಿರಸಿಯಲ್ಲಿ ಕೆಡಿಸಿಸಿ ಬ್ಯಾಂಕ್ ಶತಮಾನೋತ್ಸವ ಕಾರ್ಯಕ್ರಮಕ್ಕೆ ಸಚಿವ ಸೋಮಶೇಖರ ಚಾಲನೆ

• **ಕನ್ನಡಪ್ರಭ ವಾರ್ತೆ** ಶಿರಸಿ

ಸಹಕಾರ ಕ್ಷೇತ್ರ ಎದುರಿಸುತ್ತಿರುವ ಸಮಸ್ಯೆಗಳನ್ನು ಸರಿಪಡಿಸುವ ಸಲುವಾಗಿ ಅಗತ್ಯ ಇದ್ದಲ್ಲಿ ಕಾನೂನು ತಿದ್ದುಪಡಿ ಮಾಡುತ್ತೇವೆ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ ಹೇಳಿದರು.

ನಗರದ ಕೆಡಿಸಿಸಿ ಬ್ಯಾಂಕ್ ಶತಮಾನೋತ್ಸವ ಕಾರ್ಯಕ್ರಮಕ್ಕೆ ಸೋಮವಾರ ಚಾಲನೆ ನೀಡಿ ಮಾತನಾಡಿ, ರಾಜ್ಯದ ಎಲ್ಲ 21 ಡಿಸಿಸಿ ಬ್ಯಾಂಕ್‌ಗಳ ಪ್ರಗತಿ ಪರಿಶೀಲನೆ ನಡೆಸಿದ್ದೇನೆ. ಮೈಸೂರು, ಮಂಡ್ಯ, ಶಿವಮೊಗ್ಗ ಮತ್ತು ಕಲಬುರಗಿಯ ಡಿಸಿಸಿ ಬ್ಯಾಂಕ್ ಹೊರತುಪಡಿಸಿ ಉಳಿದೆಲ್ಲ ಬ್ಯಾಂಕ್‌ಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ. ಹಿನ್ನಡೆಯಲ್ಲಿರುವ ಈ ನಾಲ್ಕು ಬ್ಯಾಂಕ್‌ಗಳ ದೋಷ ಸರಿಪಡಿಸಿದ್ದು, ಅವೂ ಪ್ರಗತಿಯತ್ತ ಸಾಗಿವೆ. ಈ ನಡುವೆ ಕೆಲವೆಡೆ ಸಹಕಾರಿ ಕ್ಷೇತ್ರಕ್ಕೆ ಆಗಬೇಕಾದ ಬದಲಾವಣೆಯ ಬಗ್ಗೆ ಸಹಕಾರಿ ಧುರೀಣರು ಗಮನಕ್ಕೆ ತಂದಿದ್ದು, ಈ ಬಗ್ಗೆ ಪರಿಶೀಲಿಸಿ ಅಮೈನ್ಮೆಂಟ್ ತರುವ ಮೂಲಕ ಸರಿಪಡಿಸಲಾಗುವುದು ಎಂದರು.

ಸಹಕಾರ ಕ್ಷೇತ್ರದ ಕುರಿತು ಹೊರಡಿಸಲಾಗಿರುವ ಸುತ್ತೋಲೆಗಳಲ್ಲಿ ವ್ಯತ್ಯಾಸವಾದರೆ ಉಳಿದ ಜಿಲ್ಲೆಗಳ ಸಹಕಾರಿ ಧುರೀಣರು ಅಸಮಾಧಾನವನ್ನು ಬಹಿರಂಗವಾಗಿಯೇ ತೋರಿಸುತ್ತಾರೆ. ಆದರೆ, ಉತ್ತರ ಕನ್ನಡದ ಜನತೆ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಅವರ ಮೂಲಕ ನನಗೆ ಸಂದೇಶ ತಲುಪಿಸುತ್ತಿದ್ದಾರೆ. ಈ ಎಲ್ಲಕ್ಕೂ ನಾನು ಸ್ಪಂದನೆ ಮಾಡಿದ್ದೇನೆ ಎಂದರು.



ಶಿರಸಿಯಲ್ಲಿ ನಡೆದ ಕೆಡಿಸಿಸಿ ಬ್ಯಾಂಕ್ ಶತಮಾನೋತ್ಸವಕ್ಕೆ ಸಹಕಾರ ಸಚಿವ ಎಸ್.ಟಿ. ಸೋಮಶೇಖರ ಚಾಲನೆ ನೀಡಿದರು.

ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ 30 ಲಕ್ಷ ರೈತರಿಗೆ ₹20810 ಕೋಟಿ ಸಾಲ ನೀಡುವ ಗುರಿ ಹೊಂದಿದ್ದೇವೆ. ಈಗಾಗಲೇ 10 ಲಕ್ಷ ರೈತರಿಗೆ ₹7 ಸಾವಿರ ಕೋಟಿಗೂ ಅಧಿಕ ಸಾಲ ವಿತರಣೆ ಮಾಡಿದ್ದೇವೆ. ಕಳೆದ ಅವಧಿಯಲ್ಲಿ 21 ಡಿಸಿಸಿ ಬ್ಯಾಂಕ್‌ಗಳಿಗೆ ₹14200 ಕೋಟಿ ಟಾರ್ಗೆಟ್ ನೀಡಿದ್ದೆವು. ₹17695 ಕೋಟಿ ಸಾಲ ನೀಡಿದ್ದೇವೆ ಎಂದರು.

ಕೃಷಿ ಸಚಿವ ಬಿ.ಸಿ. ಪಾಟೀಲ ಮಾತನಾಡಿ, ಸಹಕಾರ ಕ್ಷೇತ್ರಕ್ಕೆ ಮೂಲ ಕೃಷಿಯೇ ಆಗಿದೆ. ಕೆಡಿಸಿಸಿ ಬ್ಯಾಂಕಿನ ಕೃಷಿಪರ ಧೋರಣೆ ಖುಷಿ ಕೊಟ್ಟಿದೆ. ಇಂದು ಕೃಷಿ ಉತ್ಪನ್ನ ಜಾಸ್ತಿ ಆದರೂ ಕೃಷಿಕ ಬಡವರಾಗಿಯೇ ಇದ್ದಾರೆ. ಕೃಷಿಗೆ ಪೂರಕ ಮಾರುಕಟ್ಟೆ ಅಗತ್ಯತೆ ಇದೆ. ಸಂಸ್ಕರಣಾ ಘಟಕಗಳು ರೈತರ ಪ್ರಗತಿಗೆ ಅಗತ್ಯ. ಈ ಹಿನ್ನೆಲೆ ಆತ್ಮನಿರ್ಭರದಲ್ಲಿ ಕೃಷಿ ಸಂಸ್ಕರಣೆಗೆ ಆದ್ಯತೆ ನೀಡಿದ್ದಾರೆ.

**ನಾನು ಬ್ಯಾಂಕಿನ ನಿರ್ದೇಶಕನೂ ಆಗಿದ್ದೆ. ಆದರೆ, ವಿಧಾನಸಭೆ ಮೆಟ್ಟಿಲು ಹತ್ತಿದ ಬಳಿಕ ನಾನು ಈ ಬ್ಯಾಂಕ್ ನಿರ್ದೇಶಕ ಸ್ಥಾನದತ್ತ ನೋಡಲಿಲ್ಲ. ಸಹಕರಿ ಕ್ಷೇತ್ರದಿಂದ ರಾಷ್ಟ್ರ ಮತ್ತು ಗ್ರಾಮೀಣ ಅಭಿವೃದ್ಧಿ ಸಾಧ್ಯ.**

• **ಆರ್.ವಿ. ದೇಶಪಾಂಡೆ** ಶಾಸಕ

**ಪಾಳಾದಲ್ಲಿ ಕೆಡಿಸಿಸಿಯ ನೂತನ ಶಾಖೆ ಆರಂಭಿಸಲಾಗುತ್ತಿದೆ. ಶತಮಾನೋತ್ಸವದ ಹೊಸ್ತಿಲಿನಲ್ಲಿ ಈ ಶಾಖೆಗೆ ಶತಮಾನೋತ್ಸವ ಶಾಖೆ ಎಂದು ನಾಮಕರಣ ಮಾಡುತ್ತೇವೆ.**

• **ಶಿವರಾಮ ಹೆಬ್ಬಾರ** ಸಚಿವ ಹಾಗೂ ಕೆಡಿಸಿಸಿ ಬ್ಯಾಂಕ್ ಅಧ್ಯಕ್ಷ

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಸಹಕಾರ ಕ್ಷೇತ್ರದ ಸಾಧನೆ ಹಿನ್ನೆಲೆ ಜಿಲ್ಲೆಗೆ ಸಹಕಾರ ಕ್ಷೇತ್ರದ ತರಬೇತಿ ಕೇಂದ್ರ ನೀಡಲಿ. ಹೆಬ್ಬಾರ ಈ ಕೇಂದ್ರದ ರೂಪುರೇಷೆ ನಿರ್ಮಿಸಲಿ ಎಂದರು.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಸಂಸ್ಥೆ ಹುಟ್ಟುಹಾಕುವುದು ಕಷ್ಟವಲ್ಲ. ಆದರೆ, ಸಂಸ್ಥೆ ಎಷ್ಟರ ಮಟ್ಟಿಗೆ ಜನತೆ ತಲುಪುತ್ತದೆ ಎಂಬುದು ಪ್ರಮುಖ. ಭ್ರಷ್ಟಾಚಾರ, ಜಾತಿಗೆ ಆಸ್ಪದ ನೀಡದೇ ಉತ್ತರ ಕನ್ನಡದ ಸಹಕಾರ ವ್ಯವಸ್ಥೆ ಬೆಳೆದುಬಂದಿದೆ ಎಂದು ಶ್ಲಾಘಿಸಿದರು.

ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ ಅವರು ಭಾರತ ಬಿಲ್ ಪೇಮೆಂಟ್ ಸೌಲಭ್ಯವನ್ನು ಉದ್ಘಾಟಿಸಿದರು. ಶಾಸಕ ಬೆಳ್ಳಿ ಪ್ರಕಾಶ ಕೃಷಿ ಸಾಲ ಚೆಕ್‌ನ್ನು ವಿತರಿಸಿದರು. ಶಾಸಕರಾದ ಸುನೀಲ ನಾಯ್ಕ, ದಿನಕರ ಶೆಟ್ಟಿ, ಎಸ್.ವಿ. ಸಂಕನೂರ, ಆರ್.ವಿ. ದೇಶಪಾಂಡೆ, ಶ್ರೀಕಾಂತ ಘೋಟ್ನೇಕರ, ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷ ಡಾ. ಎಂ.ಎನ್. ರಾಜೇಂದ್ರಕುಮಾರ ಇತರರಿದ್ದರು. ಬ್ಯಾಂಕ್ ಅಧ್ಯಕ್ಷ ಹಾಗೂ ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಮೋಹನದಾಸ ನಾಯಕ ಸ್ವಾಗತಿಸಿದರು.

ಕನ್ನಡಪ್ರಭ Tue, 07 September 2021
https://kpepaper.asianetnews.com/c/62961087

KP




ಶಿರಸಿ ಕೆಡಿಸಿಸಿ ಬ್ಯಾಂಕ್ ಶತಮಾನ ಸಂಭ್ರಮದ ಸ್ಮರಣ ಸಂಚಿಕೆಯನ್ನು ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಬಿಡುಗಡೆಗೊಳಿಸಿದರು. ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ, ಸಚಿವರಾದ ಶಿವರಾಮ ಹೆಬ್ಬಾರ, ಎಸ್.ಟಿ. ಸೋಮಶೇಖರ, ಭೈರತಿ ಬಸವರಾಜ ಇತರರು ಇದ್ದರು.